# ‘ಅಪ್ಪಟ ಚಿನ್ನ’ ಸೋನು



ಕೊರೊನಾ ಉಂಟು ಮಾಡಿದ ತಲ್ಲಣಗಳು ಒಂದೆರಡಲ್ಲ. ಲಾಕ್‌ಡೌನ್ ಎಲ್ಲರ ಬದುಕಲ್ಲೂ ಕೋಲಾಹಲ ಉಂಟು ಮಾಡಿತು. ಉಳ್ಳವರಿಗೆ ಮನೆಯಲ್ಲೇ ಬಂಧಿಯಾಗಿ ಸಮಯ ಕೊಲ್ಲುವುದು ಹೇಗೆ ಎನ್ನುವ ಸಮಸ್ಯೆಯಾದರೆ, ಇಲ್ಲದವರಿಗೆ ಬದುಕು ಹೇಗೆ ಸಾಗಿಸುವುದು ಎನ್ನುವ ಚಿಂತೆ. ಬಾಲಿವುಡ್‌ನ ಬಹುತೇಕ ತಾರೆಯರಿಗೆ ಇಲ್ಲ ಎನ್ನುವ ಚಿಂತೆಯಿಲ್ಲ. ಸದ್ಯಕ್ಕೆ ಕೆಲಸ ಮಾಡಲು ಅವಕಾಶವಿಲ್ಲ ಎನ್ನುವುದು ಬಿಟ್ಟರೆ, ಅವರು ಈ ಲಾಕ್‌ಡೌನ್ ಅವಧಿಯಲ್ಲಿ ನೆಮ್ಮದಿಯಾಗಿಯೇ ಇದ್ದರು. ಈ ನಾಲ್ಕು ತಿಂಗಳ ಅವಧಿಯನ್ನು ಬುದ್ಧಿವಂತಿಕೆಯಿಂದ, ಸಂತೋಷದಿಂದ ಹೇಗೆ ಕಳೆದೆವು ಎನ್ನುವುದರ ಬಗ್ಗೆ ಈಗಾಗಲೆ ಬಾಲಿವುಡ್‌ನ ಹಲವು ತಾರೆಯರು ಇನ್‌ಸ್ಟಾಗ್ರಾಮ್ ಮತ್ತು ಫೇಸ್‌ಬುಕ್ ಮೂಲಕ ಬರೆದುಕೊಂಡಿದ್ದಾರೆ. ಹೀರೊ ಹೀರೋಯಿನ್‌ಗಳೆಲ್ಲ ತಾವು ನೆಮ್ಮದಿಯಿಂದ ಇರುವುದಾಗಿ ಜಗತ್ತಿಗೆ ಸಾರಿ ಹೇಳುತ್ತಿದ್ದರೆ ಬಾಲಿವುಡ್‌ನ ಒಬ್ಬ ವಿಲ್ಲನ್ ಮಾತ್ರ ಅತೃಪ್ತನಂತೆ, ನಿಜಕ್ಕೂ ತಲ್ಲಣಗೊಂಡವನಂತೆ ಪ್ರತಿ ದಿನ ಪತ್ರಿಕೆಗಳಲ್ಲಿ ಸುದ್ದಿಯಾಗುತ್ತಿದ್ದ. ಆತ ಸೋನು ಸೂದ್. ಐದು ಭಾಷೆಗಳ ಚಿತ್ರಗಳಲ್ಲಿ ವಿಲ್ಲನ್ ಪಾತ್ರಗಳಲ್ಲಿ ರಾರಾಜಿಸುತ್ತಿರುವ ಅಪ್ಪಟ ವಜ್ರ.

ಮುಖ್ಯವಾಗಿ ಲಾಕ್‌ಡೌನ್‌ನಿಂದ ಬೀದಿಗೆ ಬಿದ್ದ ಬಡವರು ಮತ್ತು ಕಾರ್ಮಿಕರನ್ನು ಮನೆ ಸೇರಿಸಲು ಸೋನು ಸೂದ್ ನಡೆಸಿದ ಮಾನವೀಯ ಪ್ರಯತ್ನಗಳು ಬಾಲಿವುಡ್‌ನ ಇತಿಹಾಸದಲ್ಲಿ ಎಂದೆಂದೂ ದಾಖಲಾಗಿ ಉಳಿಯುವಂತಿವೆ. ಮನುಷ್ಯತ್ವದ ಬಗ್ಗೆ ನಂಬಿಕೆಯುಳ್ಳ ಯಾರೇ ಆದರೂ ಈ ಕಷ್ಟಕಾಲದಲ್ಲಿ ಗುರುತು ಪರಿಚಯವೂ ಇಲ್ಲದ ಸಾವಿರಾರು ಜನರಿಗೆ ನೆರವಾದ ಸೋನು, ತನ್ನದು ಅಪ್ಪಟ ಚಿನ್ನದಂತಹ ವ್ಯಕ್ತಿತ್ವ ಎನ್ನುವುದನ್ನು ಸಾಬೀತುಪಡಿಸಿದರು. ಬಾಲಿವುಡ್‌ನಲ್ಲಿ ಯಾರೂ ಬಡವರಿಗೆ ನೆರವಾಗಲಿಲ್ಲ ಎಂದಲ್ಲ. ತಮ್ಮದೊಂದು ಪಾಲು ಎಂಬಂತೆ ಹಲವು ಹೀರೋಗಳು ಇಂತಿಷ್ಟು ದುಡ್ಡು ಎಂದು ಪಿಎಂ/ ಸಿಎಂ ಕೇರ್ ನಿಧಿಗಳಿಗೆ ಹಣ ಕೊಟ್ಟು ಕೈತೊಳೆದುಕೊಂಡರು. ಆದರೆ ಸೋನು ಹಾಗಲ್ಲ. ಖುದ್ದಾಗಿ ತಂಡವೊಂದನ್ನು ಕಟ್ಟಿಕೊಂಡು ಬಸ್‌ಸ್ಟ್ಯಾಂಡ್‌ನಲ್ಲಿ, ರೈಲು ನಿಲ್ದಾಣಗಳಲ್ಲಿ ಕಂಗಾಲಾಗಿ ಹಗಲು ರಾತ್ರಿ ಕುಳಿತಿದ್ದ ಸಾವಿರಾರು ಜನರು ನೆಮ್ಮದಿಯಿಂದ ಮನೆ ಸೇರಲು ಬಸ್, ರೈಲು ಪ್ರಯಾಣಗಳ ನೆರವು ನೀಡಿದರು. ವಿದೇಶಗಳಲ್ಲಿ ಸಿಕ್ಕುಬಿದ್ದಿದ್ದ ಸಾವಿರಾರು ಭಾರತೀಯರು ಸ್ವದೇಶ ಸೇರಲು ವಿಶೇಷ ವಿಮಾನ ಪ್ರಯಾಣದ ವ್ಯವಸ್ಥೆ ಮಾಡಿದರು.

ಉಳಿದೆಲ್ಲ ಹೀರೊ, ಹೀರೊಯಿನ್‌ಗಳೂ ಕೊರೊನಾದ ನೆರವಿನ ಅಗತ್ಯವನ್ನು ಈಗ ಮರೆತೇ ಕುಳಿತಿದ್ದರೆ ಒಬ್ಬ ಸೋನು ಮಾತ್ರ ಪತ್ರಿಕೆಗಳಲ್ಲಿ ವರದಿಯಾಗುವ ಇಂತಹ ಸಂಕಷ್ಟದ ಕುಟುಂಬಗಳ ಕಥೆಗಳಿಗೆ ಈಗಲೂ ಕಣ್ಣು ಕಿವಿ ತೆರೆದುಕೊಂಡೇ ಕುಳಿತಿದ್ದಾರೆ. ಇದಕ್ಕೆ ಇತ್ತೀಚಿನ ಉದಾಹರಣೆ ಕರ್ನಾಟಕದ ಯಾದಗಿರಿಯ ಬಡ ಕುಟುಂಬಕ್ಕೆ ಸೋನು ನೀಡಿದ ನೆರವು. ಸ್ಥಳೀಯ ಪತ್ರಕರ್ತನೊಬ್ಬ ಮಾಡಿದ ಮೆಸೇಜ್ ಒಂದಕ್ಕೆ ತಕ್ಷಣ ಸ್ಪಂದಿಸಿದ ಸೋನು, ಮೂವರು ತ್ರಿವಳಿ ಮಕ್ಕಳನ್ನು ಹೆತ್ತ ಮಹಿಳೆಯ ಕುಟುಂಬಕ್ಕೆ ಮೂರು ತಿಂಗಳ ದಿನಸಿ ಪದಾರ್ಥ ಮತ್ತು ಚಿಕಿತ್ಸೆಯ ವೆಚ್ಚವನ್ನು ಕಳುಹಿಸಿದರು. ಮೂರೂ ಮಕ್ಕಳನ್ನು ದತ್ತು ತೆಗೆದುಕೊಂಡಿರುವುದಾಗಿಯೂ ಪ್ರಕಟಿಸಿದರು. ಇಲ್ಲಿ ಕನ್ನಡದ ಹೀರೋ ಹೀರೋಯಿನ್‌ಗಳೆಲ್ಲ ಸ್ಯಾಂಡಲ್‌ವುಡ್‌ನಲ್ಲಿ ಮಾದಕ ದ್ರವ್ಯ ಹಾವಳಿಯ ಕುರಿತ ಚರ್ಚೆಯಲ್ಲಿ ಬ್ಯುಸಿಯಾಗಿರುವಾಗಲೇ, ದೂರದ ಮುಂಬೈಯಲ್ಲಿ ಕುಳಿತಿರುವ ಸೋನು ಮಾಡಿರುವ ಈ ನೆರವು ಕನ್ನಡಿಗರ ಕಣ್ಣು ತೆರೆಸುವಂತಿದೆ.

ಎರಡು ತಿಂಗಳ ಹಿಂದೆಯಷ್ಟೇ 48ರ ಹರೆಯಕ್ಕೆ ಕಾಲಿಟ್ಟ ಸೋನು ಸೂದ್, ಬಾಲಿವುಡ್ ಮಾತ್ರವಲ್ಲ, ತೆಲುಗು, ತಮಿಳು, ಕನ್ನಡ ಮತ್ತು ಪಂಜಾಬಿ ಭಾಷೆಯ ಚಿತ್ರಗಳಲ್ಲೂ ಅತ್ಯಂತ ಜನಪ್ರಿಯ ವಿಲ್ಲನ್. ಕೆಲವು ಚಿತ್ರಗಳಲ್ಲಿ ಹೀರೊಗೆ ಬೀಳುವುದಕ್ಕಿಂತಲೂ ಹೆಚ್ಚಿನ ಸಿಳ್ಳೆಗಳು ಇವತ್ತು ಸೋನುಗೆ ಬೀಳುತ್ತಿವೆ! ಪಂಜಾಬ್ ರಾಜ್ಯದ ಮೋಗಾದಲ್ಲಿ ಜನಿಸಿದ ಸೋನು ಓದಿದ್ದು ನಾಗಪುರದಲ್ಲಿ. ಮಾಡಿದ್ದು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್. ಹೀರೊ ಆಗುವ ಕನಸಿನೊಂದಿಗೆ ಮುಂಬೈಗೆ ಬಂದಿಳಿದಾಗ ಆತನ ಕಿಸೆಯಲ್ಲಿ ಇದ್ದದ್ದು ಕೇವಲ ಐದೂವರೆ ಸಾವಿರ ರೂಪಾಯಿ. ಸಿಂಗಲ್ ರೂಂ ಮನೆಯೊಂದರಲ್ಲಿ 3–4 ಜನರ ಜತೆಗೆ ವಾಸಿಸಿ, ಕೆಲಸ ಹುಡುಕಲು ಲೋಕಲ್ ಟ್ರೈನಿನಲ್ಲಿ ಓಡಾಡುತ್ತಿದ್ದ ಸೋನು, ತನ್ನ ಪೂರ್ವಾಶ್ರಮದ ಕಷ್ಟದ ಬದುಕಿನ ಪುಟಗಳನ್ನು ಇವತ್ತಿಗೂ ಮರೆತಿಲ್ಲ.

ಆತ ಮೊದಲು ನಟಿಸಿದ್ದು (1999) ಎರಡು ತಮಿಳು ಚಿತ್ರಗಳಲ್ಲಿ. ಬಳಿಕ ತೆಲುಗು ಚಿತ್ರರಂಗ ಕೈಬೀಸಿ ಕರೆಯಿತು. ಈ ಎರಡೂ ಭಾಷೆಗಳ ಎರಡು ಚಿತ್ರಗಳು ಈತನನ್ನು ಮುಂಬೈಯ ನಿರ್ಮಾಪಕರೂ ಹಿಂತಿರುಗಿ ನೋಡುವಂತೆ ಮಾಡಿತು. ಮೂರು ವರ್ಷಗಳ ಬಳಿಕ ಬಾಲಿವುಡ್ ಅವಕಾಶದ ಬಾಗಿಲು ತೆರೆಯಿತು.

‘ಬಾಲಿವುಡ್‌ನಲ್ಲಿ ಅವಕಾಶ ಪಡೆಯಲೆಂದೇ ದೆಹಲಿಯಲ್ಲಿ ಹಲವು ಮಾಡೆಲಿಂಗ್ ಶೋಗಳಲ್ಲಿ ಭಾಗವಹಿಸಿದೆ. ಒಟ್ಟು ಐದೂವರೆ ಸಾವಿರ ರೂಪಾಯಿ ಇಟ್ಟುಕೊಂಡು ಬಾಲಿವುಡ್‌ನಲ್ಲಿ ಕೆಲಸ ಹುಡುಕಿಕೊಂಡು ಹೊರಟೆ. ಅದು ಒಂದು ತಿಂಗಳಿಗೆ ಖರ್ಚಿಗೆ ಸಾಕಾಗಬಹುದು ಎಂದುಕೊಂಡಿದ್ದೆ. ಆದರೆ ನಾಲ್ಕೈದು ದಿನಗಳಲ್ಲೇ ಹಣ ಖರ್ಚಾಯಿತು. ಮುಂದೇನು ಎಂದು ಯೋಚಿಸುತ್ತಿದ್ದಾಗ ಜಾಹೀರಾತು ಚಿತ್ರವೊಂದಕ್ಕೆ ಕರೆ ಬಂತು! ಅದಕ್ಕೆ ಸಿಕ್ಕ ಸಂಭಾವನೆ 2000 ರೂಪಾಯಿ!’ ಎಂದು ಸಂದರ್ಶನವೊಂದರಲ್ಲಿ ಸೋನು ತನ್ನ ಕಷ್ಟದ ದಿನಗಳನ್ನು ನೆನಪಿಸಿಕೊಂಡಿದ್ದಾರೆ.

ಕನ್ನಡದಲ್ಲಿ ಆತ ಸುದೀಪ್ ಎದುರಿಗೆ ನಟಿಸಿದ ‘ವಿಷ್ಣುವರ್ಧನ’ ಚಿತ್ರದಲ್ಲೂ ಭಾರೀ ಜನಪ್ರಿಯತೆ ಗಳಿಸಿದರು. ‘ಅರುಂಧತಿ’ ತೆಲುಗು ಚಿತ್ರದಲ್ಲಿ ಈತನ ವಿಲ್ಲನ್ ಪಾತ್ರನಿರ್ವಹಣೆ ಇವತ್ತಿಗೂ ಪ್ರೇಕ್ಷಕರ ಮನದಲ್ಲಿದೆ. 2009ರಲ್ಲಿ ಅದಕ್ಕೆ ಬೆಸ್ಟ್ ವಿಲನ್ ಆಂಧ್ರ ಪ್ರದೇಶ ಸರಕಾರದ ನಂದಿ ಪ್ರಶಸ್ತಿ, ಫಿಲಂಫೇರ್ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಅರಸಿಕೊಂಡು ಬಂತು. 2010ರಲ್ಲಿ ಸಲ್ಮಾನ್ ಖಾನ್ ಅಭಿನಯದ ‘ಧಬಾಂಗ್’ ವಿಲನ್ ಪಾತ್ರಕ್ಕೆ ಅಪ್ಸರಾ ಪ್ರಶಸ್ತಿ ಮತ್ತು ಐಫಾ ಪ್ರಶಸ್ತಿ ಸಿಕ್ಕಿತು. 2012ರಲ್ಲಿ ‘ಜುಲಾಯಿ’ ವಿಲ್ಲನ್ ಪಾತ್ರಕ್ಕಾಗಿ ಸೈಮಾ ಪ್ರಶಸ್ತಿ ಗೆದ್ದುಕೊಂಡರು. ಈಗ ಸೋನು ತೆಲುಗು, ತಮಿಳು, ಕನ್ನಡ, ಪಂಜಾಬಿ, ಹಿಂದಿ, ಕನ್ನಡ ದಲ್ಲಿ ಬೇಡಿಕೆಯ ವಿಲ್ಲನ್.

ಅಪೊಲೊ ಟೈರ್ಸ್ ಮತ್ತು ಏರ್‌ಟೆಲ್ ನಲ್ಲಿ ಮಾಡೆಲ್ ಆಗಿ ಮಿಂಚುತ್ತಿರುವ ಸೋನು, ತಂದೆಯ ಹೆಸರಲ್ಲಿ ಶಕ್ತಿ ಸಾಗರ್ ಪ್ರೊಡಕ್ಷನ್ಸ್ ಆರಂಭಿಸಿ ಹಲವು ಸಿನಿಮಾಗಳನ್ನು ನಿರ್ಮಿಸಿದರು. ಸೋನು ಬಾಲಿವುಡ್‌ನ ನೂರಾರು, ಸಾವಿರಾರು ಕೋಟಿ ಬೆಲೆ ಬಾಳುವ ಹೀರೊಗಳಂತೆ ಭಾರೀ ಶ್ರೀಮಂತರೇನಲ್ಲ. ಅವರ ಒಟ್ಟು ಆಸ್ತಿ ಹೆಚ್ಚೆಂದರೆ 30 ಕೋಟಿ ರೂಪಾಯಿ. ಶ್ರೀಮಂತಿಕೆ ಇರುವುದು ತಿಜೋರಿಯಲ್ಲಲ್ಲ, ಹೃದಯದಲ್ಲಿ ಎನ್ನುವುದನ್ನು ಸೋನು ಸಾಬೀತು ಮಾಡಿದ್ದಾರೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65